# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಃ ಕೋಲಾರ

## ಸ್ಪೆಷಲ್.ಎಸ್.ಸಿ.ಐಪಿಸಿ & ಎಸ್‌ಸಿ/ಎಸ್‌ಟಿ. ನಂಃ 01/2019

ಪ್ರಾಸಾ ಃ 1 (ಚಾಸಾ ಃ 1 )

ಪ್ರಮಾಣೀಕರಿಸಿದ ದಿನಾಂಕಃ **17-08-2019**

ಹೆಸರು ಃ ವೆಂಕಟೇಶಪ್ಪ
ತಂದೆಯ ಹೆಸರು ಃ ವೆಂಕಟರಾಯಪ್ಪ

ವಯಸ್ಸು ಃ 52 ವರ್ಷ

ಕೆಲಸ ಃ ಕೂಲಿ

ವಾಸ ಃ ಮುಗಿಲಹಳ್ಳಿ

ಸಾಕ್ಷಿಗೆ ಕನ್ನಡ ಬರದೇ ಇರುವ ಕಾರಣ ಸ್ಪೆಷಲ್ ಪಿಪಿ ಮುನಿಸ್ವಾಮಿಗೌಡ ಅವರನ್ನು ಭಾಷಾಂತರಕಾರರನ್ನಾಗಿ ನೇಮಿಸಿಕೊಳ್ಳಲಾಯಿತು.

**ಮುಖ್ಯ ವಿಚಾರಣೆಃ- ಮಾನ್ಯ ಪಿಪಿ ರವರಿಂದಃ**

ಚಾಸಾ 2 ನನ್ನ ಹೆಂಡತಿ, ಚಾಸಾ 3 ನಾರಾಯಣಪ್ಪ ನನ್ನ ಅಣ್ಣ, ಚಾಸಾ 4 ಹರೀಶ ನನ್ನ ಅಣ್ಣನ ಮಗ, ಚಾಸಾ 5 ರವಿಕುಮಾರ್ ನನ್ನ ಮಗ, ಚಾಸಾ 6 ನನ್ನ ಅಣ್ಣನ ಮಗ, ಆರೋಪಿತರು ಗೊತ್ತು. ನಾವು ಆದಿ ದ್ರಾವಿಡ ಜಾತಿಯವರು, ಆರೋಪಿತರು ನಟವ ಜನಾಂಗದವರು, ಅವರು ನಮ್ಮ ಊರಿನವರು. ಮೃತ ಶ್ರೀನಾಥ ನನ್ನ ಮಗ. ಸುಮಾರು 11 ತಿಂಗಳ ಹಿಂದೆ ಆತ ನೇಣು ಹಾಕಿಕೊಂಡು ತೀರಿಕೊಂಡ. ಆರೋಪಿ ಅನಂತಪ್ಪ ಅವರ ಬಳಿ ನನ್ನ ಮಗ ಮಗ ಗಾರೆ ಕೆಲಸಕ್ಕೆ ಹೋಗುತ್ತಿದ್ದ. ನಾನು ಮತ್ತು ನನ್ನ ಮಗ ಆರೋಪಿತರ ಮನೆಯನ್ನು ಕಟ್ಟಿದೆವು. ನಮಗೂ ಆರೋಪಿತರಿಗೂ ಯಾವುದೇ ಹಣದ ವ್ಯವಹಾರ ಇಲ್ಲ. 2 ನೇ ಆರೋಪಿಯ ಮಗಳು ಅಕಿಲ. ನನ್ನ ಮಗ ಮತ್ತು ಅಕಿಲ ಪ್ರೀತಿ ಮಾಡುತ್ತಿದ್ದರು.

ನನ್ನ ಮಗ ಸಾಯುವ ಒಂದು ವರ್ಷದ ಮುಂದೆ ನಮ್ಮ ಅಣ್ಣನ ಮನೆಯ ಮುಂದೆ ಆರೋಪಿತರು ಬಂದು ಚಾಸಾ 3 ಅವರಿಗೆ ನಿಮ್ಮ ಮಗನನ್ನು ಬದ್ರ ಮಾಡಿಕೊಳ್ಳಿ, ಇಲ್ಲದಿದ್ದರೆ ಸಾಯಿಸುತ್ತೇವೆ ಎಂದು ವಾರ್ನಿಂಗ್ ಮಾಡಿದ್ದು, ಅದನ್ನು ನನ್ನ ಅಣ್ಣ ನನಗೆ ಹೇಳಿದನು. ನನಗೆ ಯಾವುದೇ ಬೆದರಿಕೆ ಹಾಕಿಲ್ಲ. ನನ್ನ ಮಗನಿಗೂ ಸಾಯಿಸುತ್ತೇವೆ ಎಂದು ಬೆದರಿಕೆ ಹಾಕಿದ್ದರು. ನನ್ನ

ಮುಂದೆ ಯಾವುದೇ ರೀತಿಯ ಬೆದರಿಕೆ ಹಾಕಿಲ್ಲ. ನಾವು ಕೂಲಿ ಮಾಡುವ ಜನ ಆ ರೀತಿ ಮಾಡಬೇಡ ಎಂದು ನನ್ನ ಮಗನಿಗೆ ಬುದ್ದಿ ಹೇಳಿದ್ದೆ. ನಂತರ ಅಕಿಲಳನ್ನು ಬೇರೆಯವರಿಗೆ ಕೊಟ್ಟು ಮದುವೆ ಮಾಡಿದ್ದರು. ನಂತರ ನನ್ನ ಮಗನಿಗೆ ಬೈದಿದ್ದರು. ನನ್ನ ಮಗ ನನಗೆ ಏನೂ ಹೇಳಲಿಲ್ಲ. ಅವರು ಬೈದಿದ್ದರಿಂದ ನನ್ನ ಮಗ ಹೋಗಿ ನಂಜುಂಡಪ್ಪ ಅವರ ತೋಟದಲ್ಲಿ ಮರಕ್ಕೆ ನೇಣು ಹಾಕಿಕೊಂಡಿದ್ದನು. ನನ್ನ ಮಗನ ಸಾವಿಗೆ ಆರೋಪಿತರೇ ಕಾರಣ. ಅವರ ಹುಡುಗಿಯನ್ನು ಪ್ರೀತಿಸಿದ್ದು ಸಾಯಿಸುತ್ತೇವೆ ಎಂದು ಹೆದರಿಸಿದ್ದರಿಂದ ಆ ರೀತಿ ಮಾಡಿದ್ದಾನೆ. ನನ್ನ ಮಗ ತೀರಿಕೊಂಡ ನಂತರ ನಾನು ಆರೋಪಿತರ ವಿರುದ್ಧ ದೂರು ಕೊಟ್ಟು ಹೆಬ್ಬೆಟ್ಟಿನ ರುಜು ಮಾಡಿದ್ದೇನೆ.

ಈಗ ಓದಿ ಹೇಳಿದ ದೂರನ್ನು ನಾನು ಕೊಟ್ಟಿದ್ದು, ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ನಂತರ ಪೋಲೀಸರು ಸ್ಥಳಕ್ಕೆ ಬಂದಿದ್ದರು. ಅಲ್ಲಿ ಬಂದು ಪರಿಶೀಲನೆ ಮಾಡಿ ಬರೆದುಕೊಂಡರು. ಶವವನ್ನು ಮರದಿಂದ ಇಳಿಸಿದರು. ಅಲ್ಲಿಂದ ಪೊಲೀಸರು ಏನೇನು ತೆಗೆದುಕೊಂಡರು ಎಂದು ಗೊತ್ತಿಲ್ಲ. ಈಗ ಓದಿ ಹೇಳಿದ ಮಹಜರ್-ಗೆ ನಾನು ಹೆಬ್ಬೆಟ್ಟಿನ ರುಜು ಮಾಡಿದ್ದೇನೆ. ಸದರಿ ಮಹಜರ್ ಅನ್ನು ನಿಪಿ 2 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಹಗ್ಗದಿಂದ ನನ್ನ ಮಗ ನೇಣು ಹಾಕಿಕೊಂಡಿದ್ದ. ಅದನ್ನು ಮು.ಮಾಲು 1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮೊಬೈಲ್ ಅನ್ನು ಹಾಜರುಪಡಿಸದೇ ಇರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

(ಬಿ.ಎಸ್. ರೇಖ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.

## ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ : ಕೋಲಾರ

**ಸ್ಪೆಷಲ್.ಎಸ್.ಸಿ.ಐಪಿಸಿ & ಎಸ್‌ಸಿ/ಎಸ್‌ಟಿ. ನಂ: 01/2019**

ಪ್ರಾಸಾ : 2 (ಚಾಸಾ : 2 )

ಪ್ರಮಾಣೀಕರಿಸಿದ ದಿನಾಂಕ: **17-08-2019**

ಹೆಸರು : ಲಕ್ಷ್ಮಮ್ಮ
ಗಂಡನ ಹೆಸರು : ವೆಂಕಟೇಶಪ್ಪ

ವಯಸ್ಸು : 45 ವರ್ಷ

ಕೆಲಸ : ಕೂಲಿ

ವಾಸ : ಮುಗಿಲಹಳ್ಳಿ

ಸಾಕ್ಷಿಗೆ ಕನ್ನಡ ಬರದೇ ಇರುವ ಕಾರಣ ಸ್ಪೆಷಲ್ ಪಿಪಿ ಮುನಿಸ್ವಾಮಿಗೌಡ ಅವರನ್ನು ಭಾಷಾಂತರಕಾರರನ್ನಾಗಿ ನೇಮಿಸಿಕೊಳ್ಳಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಪಿಪಿ ರವರಿಂದ:**

ಫಿರ್ಯಾದಿ ನನ್ನ ಗಂಡ, ಮೃತ ಶ್ರೀನಾಥ ನನ್ನ ಮಗ, ನಾವು ಆದಿ ದ್ರಾವಿಡ ಜಾತಿಯವರು. ಆರೋಪಿತರು ಗೊತ್ತು. ಅವರು ನಟವ (ಬಲಜಿಗ) ಜಾತಿಯವರು. ನನ್ನ ಮಗ ಬದುಕಿಲ್ಲ. ಸುಮಾರು 10 ತಿಂಗಳ ಹಿಂದೆ ನೇಣು ಹಾಕಿಕೊಂಡು ನನ್ನ ಮಗ ತೀರಿಕೊಂಡ. ನನ್ನ ಮಗ ತೀರಿಕೊಳ್ಳುವ 4 ದಿನಗಳ ಹಿಂದೆ ಆರೋಪಿತರು ನಮ್ಮ ಭಾವನ ಮನೆಯ ಬಳಿ ಬಂದು ವಾರ್ನಿಂಗ್ ಕೊಟ್ಟು ಹೋಗಿದ್ದರು.

ಅನಂತಪ್ಪ ಅವರ ಮಗಳು ಅಕಿಲಳ ಜೊತೆ ನನ್ನ ಮಗ ಯಾವ ರೀತಿ ಇದ್ದ ಎಂದು ಗೊತ್ತಿಲ್ಲ. ನಮ್ಮ ಮನೆಯ ಬಳಿ ಬಂದು ಆರೋಪಿತರು ನನ್ನನ್ನು ಅಥವಾ ನನ್ನ ಮಗನನ್ನು ಗಲಾಟೆ ಮಾಡಿಲ್ಲ. 1 ನೇ ಆರೋಪಿ ರಮೇಶ್ ನಿಮ್ಮ ಮಗನನ್ನು ಕೊಲೆ ಮಾಡುತ್ತೇವೆ ಎಂದು ಹೆದರಿಸಿದ್ದಾಗಿ ನನ್ನ ಭಾವ ಹೇಳಿದರು. ಬೇರೆ ಇನ್ನೇನೂ ಹೇಳಿಲ್ಲ. ಅವರ ಸಹವಾಸಕ್ಕೆ ಹೋಗಬೇಡ ಎಂದು ನನ್ನ ಮಗನಿಗೆ ಹೇಳಿದ್ದೆವು. ಆರೋಪಿತರು ನಮ್ಮ ಮನೆಯ ಬಳಿ ಬಂದು ಗಲಾಟೆ ಮಾಡಿಲ್ಲ. ನನ್ನ ಮಗ ಮನೆಯಿಂದ ಹೊರಟು ಹೋಗಿದ್ದ. ಆರೋಪಿತರೇ ನನ್ನ ಮಗನಿಗೆ ನೇಣು ಹಾಕಿದ್ದಾರೆ. ಮೋಹನ್-ರೆಡ್ಡಿ ಅವರ ತೋಟದ ಬಳಿ ನೇಣು ಹಾಕಿದ್ದಾರೆ. ನನ್ನ ಮಗನ ಸಾವಿಗೆ ಆರೋಪಿತರೇ

ಕಾರಣ. ಆ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ನನ್ನ ಮಗ ನೇಣು ಹಾಕಿಕೊಂಡಿದ್ದ ಜಾಗಕ್ಕೆ ನಾನು ಹೋಗಿಲ್ಲ. ನಾನು ಅಲ್ಲಿ ಏನೂ ನೋಡಿಲ್ಲ. ಬೆಳಿಗ್ಗೆ ಹೋಗಿ ಸ್ಥಳ ನೋಡಿದೆವು.

ನನ್ನ ಮಗ ನೇಣು ಹಾಕಿಕೊಂಡ ಜಾಗದ 15 ಪೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ನಿಪಿ 3 ರಿಂದ 17 ಎಂದು ಗುರುತಿಸಲಾಯಿತು. ನಾನು ಆ ಸ್ಥಳದಲ್ಲಿ ಏನನ್ನೂ ನೋಡಿಲ್ಲ. ನನ್ನ ಮಗ ಆ ದಿನ ಧರಿಸಿದ್ದ ಬಟ್ಟೆಗಳನ್ನು ಗುರುತಿಸಲು ಆಗುವುದಿಲ್ಲ. ಆರೋಪಿತರು ನನ್ನ ಮಗನಿಗೆ ತೊಂದರೆ ಕೊಡುತ್ತಿದ್ದ ಬಗ್ಗೆ ಏನೂ ಹೇಳಿಲ್ಲ. ನಾನು ಆರೋಪಿತರ ವಿರುದ್ಧ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ.

ನ್ಯಾಯಾಲಯದ ಮುಂದೆ ಇರುವ ಹಗ್ಗಗಳು ಮತ್ತು ದಾರವನ್ನು ಯಾವತ್ತೂ ನೋಡಿಲ್ಲ. ಬಟ್ಟೆಗಳು ಮತ್ತು ಚಪ್ಪಲಿಯನ್ನು ನನ್ನ ಮಗ ಮನೆಯಲ್ಲಿ ಹಾಕಿಕೊಂಡಿದ್ದಾಗ ನೋಡಿದ್ದೇನೆ. ಸದರಿ ಶರ್ಟು, ಪ್ಯಾಂಟ್, ಬನಿಯನ್, ಅಂಡರ್ ವಿಯರ್ ಮತ್ತು ಎರಡು ಚಪ್ಪಲಿಗಳನ್ನು ಮು.ಮಾಲು 2 ರಿಂದ 7 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿಪಿ ರವರು ಅನುಮತಿ ಕೋರಿರುತ್ತಾರೆ. ಕಡತವನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಮಾನ್ಯ ಪಿಪಿ ರವರಿಂದ ಃ-**

ದಿಃ 28-09-2018 ಕ್ಕೆ ಮೊದಲು ನನ್ನ ಗಂಡ ಮತ್ತು ಮಗನನ್ನು ಆರೋಪಿತರು ನಿಮ್ಮಿಂದ ನಮ್ಮ ಮಾನ ಹೋಗುತ್ತಿದೆ, ಬದುಕುವುದಕ್ಕಿಂತ ಎಲ್ಲಾದರೂ ಹೋಗಿ ಸತ್ತು ಹೋಗು, ನೀನು ಬದುಕಿದ್ದೂ ಏನು ಪ್ರಯೋಜನ ಸೂಳೆ ಮಗನೇ, ಬೋಳಿ ನನ್ನ ಮಗನೇ ಎಂದು ಬೈದರು ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ಮಗನಿಗೆ ಆರೋಪಿತರು ಹೋಗಿ ಸಾಯಿ ಎಂದು ಬೈದರು ಎಂದರೆ ಗೊತ್ತಿಲ್ಲ.

ಆರೋಪಿತರು ದಿನಾಂಕಃ 18-09-2018 ರಂದು ಸಂಜೆ 4.30 ಕ್ಕೆ ನಾನು, ನನ್ನ ಗಂಡ, ನನ್ನ ಮಗ ಶ್ರೀನಾಥ ನಾವು ಹೊಸದಾಗಿ ಕಟ್ಟುತ್ತಿರುವ ಮನೆಯ ಬಳಿ ಇದ್ದಾಗ ಆರೋಪಿತರು ಎಲ್ಲರೂ ಒಟ್ಟಾಗಿ ಬಂದು ನನ್ನ ಮಗನನ್ನು ಕುರಿತು, ಏನೋ ಕೀಳು ಜಾತಿ ನನ್ನ ಮಗನೇ, ನಿನಗೆ ನಮ್ಮ ಹುಡುಗಿ ಬೇಕಾ, ನಮ್ಮ ಹುಡುಗಿಯನ್ನು ಪ್ರೀತಿಸುವ ಬಗ್ಗೆ ಎಲ್ಲಾ ಕಡೆ ಮಾತನಾಡುತ್ತಿದ್ದಾರಂತೆ,

ನಮ್ಮ ಹುಡುಗಿಯ ತಂಟೆಗೆ ಬಂದರೆ ನಿನ್ನನ್ನು, ನಿಮ್ಮ ಕುಟುಂಬದವರನ್ನು ಪ್ರಾಣ ಸಹಿತ ಬಿಡುವುದಿಲ್ಲ, ನೀನು ಸತ್ತು ಹೋಗು ಪೀಡೆ ತೊಲುಗುತ್ತೆ ಎಂದು ಬೆದರಿಕೆ ಹಾಕಿ ಪ್ರಚೋದನೆ ಮಾಡಿದ್ದರು ಎಂದರೆ ಸರಿಯಲ್ಲ. ಆ ರೀತಿ ಘಟನೆಯಾದ 8-10 ದಿನಕ್ಕೆ ಅಕಿಲಳನ್ನು ಬೇರೆ ಕಡೆ ಮದುವೆ ಮಾಡಿದ್ದರು ಎಂದರೆ ಸರಿ. ಆತ ಸಾಯುವ 2 ದಿನಗಳ ಹಿಂದೆ 1 ನೇ ಆರೋಪಿ ಹೊಸದಾಗಿ ಕಟ್ಟುತ್ತಿರುವ ನಮ್ಮ ಭಾವನ ಮನೆಯ ಬಳಿ ಬಂದು ಅಕಿಲಳನ್ನು ಶ್ರೀನಾಥ ಪುನಃ ಸಂಪರ್ಕಿಸಲು ಪ್ರಯತ್ನಿಸುತ್ತಿದ್ದಾನೆ, ಮಾದಿಗ ನನ್ನ ಮಕ್ಕಳಾ ನಮ್ಮ ಜಾತಿಯವರೇ ಬೇಕಾ ನಿಮಗೆ ಎಂದು ಬೈದರು ಎಂದರೆ ಸರಿಯಲ್ಲ. ನನ್ನ ಭಾವ ನಮ್ಮ ಹುಡುಗನನ್ನು ನಾವು ಬಂದೋಬಸ್ತ್ ಮಾಡಿಕೊಳ್ಳುತ್ತೇವೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ.

ಅದೇ ದಿನ ಸಂಜೆ 5.30 ಗಂಟೆಗೆ ಆರೋಪಿತರು ನಮ್ಮ ಹೊಸ ಮನೆಯ ಬಳಿ ಬಂದು ಆರೋಪಿ ರಮೇಶ, ಶ್ರೀನಾಥನನ್ನು ಕುರಿತು ಏನೋ ಕೀಳು ಜಾತಿ ಮಾದಿಗ ನನ್ನ ಮಗನೇ, ನಿನಗೆ ನಮ್ಮ ಜಾತಿಯ ಹುಡುಗಿ ಬೇಕಾಗಿದ್ದಾಳಾ, ಇನ್ನೊಮ್ಮೆ ಆಕೆಯನ್ನು ಸಂಪರ್ಕಿಸಿದರೆ ನಿನ್ನನ್ನು ನಿನ್ನ ಕುಟುಂಬದವರನ್ನು ಕೊಲೆ ಮಾಡುತ್ತೇವೆ ನೀನೇ ಎಲ್ಲಾದರೂ ಹೋಗಿ ಸಾಯಿ, ಇಲ್ಲವಾದಲ್ಲಿ ನಿನ್ನ ಕುಟುಂಬವನ್ನು ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಆರೋಪಿತರು ಜಾತಿ ನಿಂದನೆ ಮಾಡಿ, ನನ್ನ ಮಗನಿಗೆ ಎಲ್ಲಾದರೂ ಹೋಗಿ ಸಾಯಿ ಎಂದು ಪ್ರಚೋದನೆ ಮಾಡಿದರು ಎಂದರೆ ಸರಿಯಲ್ಲ. ನನ್ನ ಮಗ ನಾನು ಬದುಕಿದ್ದು ಏನೂ ಪ್ರಯೋಜನ ಎಂದು ಅವಮಾನ ಪಟ್ಟುಕೊಂಡ ಎಂದರೆ ಸರಿಯಲ್ಲ.

ದಿಃ 28-09-2018 ರಂದು ನನ್ನ ಮಗ ಮನೆಯಿಂದ ಹೋದವನು ವಾಪಸ್ಸು ಬರಲಿಲ್ಲ ಎಂದರೆ ಸರಿ. ದಿಃ 29-09-2018 ರಂದು ನನ್ನ ಮಗ ನಂಜುಂಡರೆಡ್ಡಿ ಅವರ ಜಮೀನಿನಲ್ಲಿ ನೇಣು ಹಾಕಿಕೊಂಡಿದ್ದ ಎಂದರೆ ಸರಿಯಲ್ಲ. ನಾನು ಆ ಸ್ಥಳವನ್ನು ನೋಡಿದೆ ಎಂದರೆ ಸರಿಯಲ್ಲ. ಆರೋಪಿತರು ಬಂದು ನನ್ನ ಮಗನನ್ನು ಅವಮಾನ ಮಾಡಿದ್ದು, ಆತನನ್ನು ಎಲ್ಲಿಯಾದರೂ ಹೋಗಿ ಸಾಯಿ ಎಂದು ಹೇಳಿದ್ದರಿಂದ ಆ ರೀತಿ ಆತ್ಮಹತ್ಯೆ ಮಾಡಿಕೊಂಡ ಎಂದರೆ ಸರಿಯಲ್ಲ.

ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ 18 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಎರಡು ಹಗ್ಗಗಳನ್ನು ನೇಣು ಹಾಕಿಕೊಳ್ಳಲು ಉಪಯೋಗಿಸಿದ್ದು, ಒಂದು ದಾರದಿಂದ ಆತನ ಕೈ ಕಟ್ಟಿತ್ತು ಎಂದರೆ ಸರಿ. ಒಂದು ಸಣ್ಣ ಹಗ್ಗ ಮತ್ತು ದಾರವನ್ನು ಮು.ಮಾಲು 1(ಎ) ಮತ್ತು ಮು.ಮಾಲು 8 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಕಪ್ಪುದಾರ ನನ್ನ ಮಗನಿಗೆ ಸಂಬಂಧಪಟ್ಟಿದ್ದು, ಅದನ್ನು ಮು.ಮಾಲು 9 ಎಂದು ಗುರುತಿಸಲಾಯಿತು. ಆರೋಪಿತರು ನನ್ನ ಮಗನನ್ನು ನನ್ನ ಮುಂದೆ ಬೈದು, ಆತ ಸಾಯಲು ಪ್ರಚೋದನೆ ಮಾಡಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ ಸಿಕೆ ವಕೀಲರಿಂದ ಃ-**

ವಕೀಲರು ಕಾಲಾವಕಾಶ ಕೋರಿರುತ್ತಾರೆ. ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

(ಬಿ.ಎಸ್. ರೇಖ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.